ಸಿಂಧುತ್ವ ಪ್ರಮಾಣ ಪತ್ರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 245(443)

ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮವರ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ (ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿನ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಪ್ರವೇಶ ಪಡೆಯುವಾಗ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯ ಪಡೆಯಲು ಒದಗಿಸುವ ಸಿಂಧುತ್ವ ಪ್ರಮಾಣಪತ್ರಗಳಲ್ಲಿ ಎಷ್ಟು ಅಸಿಂಧು ಪ್ರಕರಣಗಳು ಪತ್ತೆಯಾಗಿವೆ? ಅಂತಹವರ ಮೇಲೆ ಯಾವ ಕ್ರಮಗಳನ್ನು ಕಾನೂನಿನ್ವಯ ಕ್ರಮ ಜರುಗಿಸಲಾಗಿದೆ?

ಆ) ಸಿಂಧುತ್ವ ಪ್ರಮಾಣ ಪತ್ರವನ್ನು ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ನೀಡುವಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳಾವುವು?

ಉತ್ತರ

ಅ) ರಾಜ್ಯದಲ್ಲಿನ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಸೀಟು ಪಡೆಯುವಾಗ ಯಾವ ಅಭ್ಯರ್ಥಿಯೂ ಅಸಿಂಧುವೆನಿಸದ ಸಿಂಧುತ್ವ ಪ್ರಮಾಣ ಪತ್ರ ಹಾಜರ್ಪಡಿಸಿರುವುದು ಕಂಡುಬಂದಿಲ್ಲ. ಆದ್ದರಿಂದ ಕಾನೂನು ಕ್ರಮ ಕೈಗೊಳ್ಳುವ ಅವಶ್ಯಕತೆ ಉದ್ಭವಿಸುವುದಿಲ್ಲ.

ಆ) ಪ್ರತಿ ಜಿಲ್ಲೆಯಲ್ಲಿ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಇದ್ದು ಇದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಸಂಬಂಧಿಸಿದ ಇಲಾಖೆಯ ಜಿಲ್ಲೆ ಅಧಿಕಾರಿಗಳು ಹಾಗೂ ಸ್ಥಳೀಯ ಕಂದಾಯ ಇಲಾಖೆಯ ಅಧಿಕಾರಿಗಳು ಸಿಂಧುತ್ವ ಪ್ರಮಾಣ ಪತ್ರಕ್ಕೆ ಬಂದ ಅರ್ಜಿಗಳನ್ನು ಕೂಲಂಕಷವಾಗಿ ತನಿಖೆ ಮಾಡಿ ನಂತರ ಸಮಿತಿ ಅನುಮೋದನೆ ಪಡೆದು ಜಿಲ್ಲಾಧಿಕಾರಿಗಳು ನೀಡುವುದರಿಂದ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಇದನ್ನು ನೀಡಲಾಗುತ್ತಿದೆ.

ರಾಜೀವಗಾಂಧಿ ವಸತಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 246(444)

ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮವರ)

ಉತ್ತರಿಸುವ ಸಚಿವರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)

ಪ್ರಶ್ನೆ

ಅ. ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಬಡವರಿಗೆ ವಸತಿ ಯೋಜನೆಗೆ ಸಬ್ಸಿಡಿ ನೀಡುತ್ತಿಲ್ಲದಿರುವುದು ಸರಿಯೇ? ಬಡವರಲ್ಲಿ ಗ್ರಾಮಾಂತರ ಮತ್ತು ನಗರ ಪ್ರದೇಶಗಳೆಂದು ತಾರತಮ್ಯ ಮಾಡಲು ಕಾರಣಗಳೇನು?

ಆ. ಸಬ್ಸಿಡಿಯನ್ನು ಗ್ರಾಮಾಂತರ ಹಾಗೂ ನಗರ ಪ್ರದೇಶಗಳೆರಡಕ್ಕೂ ಸಮಾನವಾಗಿ ನೀಡಲು ಸರಕಾರ ಮುಂದಾಗುವುದೇ?

ಇ. ಮತ್ಸ್ಯ ಆಶ್ರಯ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ ನೀಡಲಾದ ಮನೆಗಳ ಸಂಖ್ಯೆ ಎಷ್ಟು; ಈ ಯೋಜನೆಯಡಿಯಲ್ಲಿ ಗ್ರಾಮಾಂತರಕ್ಕೆ ಶೇಕಡ ನೂರರಷ್ಟು ಸಬ್ಸಿಡಿ ಕೊಟ್ಟು ಪಟ್ಟಣ ಪ್ರದೇಶಕ್ಕೆ ಸಬ್ಸಿಡಿಯಲ್ಲಿ ತಾರತಮ್ಯ ಮಾಡಲು ಕಾರಣಗಳೇನು; ಇದನ್ನು ಸರಿಪಡಿಸಲಾಗುವುದೇ?

ಉತ್ತರ

ಅ. ಗ್ರಾಮಾಂತರ ಪ್ರದೇಶದ ಬಡವರ ಆರ್ಥಿಕ ದುರ್ಬಲತೆಯನ್ನು ಪರಿಗಣಿಸಿ ಸಹಾಯ ಧನವನ್ನು ನೀಡಲಾಗುತ್ತಿದೆ. ನಗರ ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡ ಕುಟುಂಬಗಳಿಗಾಗಿ ನಿರ್ಮಿಸುವ ಮನೆಗಳಿಗಾಗಿಯೂ ಸಹಾಯಧನ ನೀಡಲಾಗುತ್ತಿದೆ.

ಆ. ಈ ಬಗ್ಗೆ ಪರಿಶೀಲಿಸಲಾಗುವುದು.

ಇ. ಮೀನುಗಾರಿಕೆ ಇಲಾಖೆಯಿಂದ ಮತ್ಸ್ಯ ಆಶ್ರಯ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ 5000 ಮನೆಗಳನ್ನು ಮಂಜೂರು ಮಾಡಲಾಗಿದೆ. ಈ ಯೋಜನೆಯಡಿ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಬ್ಸಿಡಿ ನೀಡುವಲ್ಲಿ ತಾರತಮ್ಯವಿರುವುದಿಲ್ಲ.

ರಾಜ್ಯ ಹೈಕೋರ್ಟ್‌ನಲ್ಲಿರುವ ಆಸ್ಪತ್ರೆ.